# ಮೈಸೂರು ವಾರಿಯರ್ಸ್ ತಂಡದಲ್ಲಿ ನಗರದ ನಂದಕಿಶೋರ್, ಎನ್. ಶ್ರೇಯಸ್

ಮೈಸೂರು: ಮುಂಬರುವ ಕರ್ನಾಟಕ ಕ್ರಿಕೆಟ್ ಲೀಗ್ ಪಂದ್ಯಾವಳಿಯಲ್ಲಿ ಮೈಸೂರಿನ ಇಬ್ಬರು ಯುವ ಕ್ರಿಕೆಟ್ ಆಟಗಾರರು ತವರು ತಂಡ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಕಳೆದ ಹಲವು ದಿನಗಳಿಂದ ಮೈಸೂರಿನ ಮಾನಸ ಗಂಗೋತ್ರಿಯಯದ ಎಸ್‌ಡಿಎನ್‌ಆರ್ ಮೈದಾನದಲ್ಲಿ ಮೈಸೂರು ವಾರಿಯರ್ಸ್ ತಂಡ ನಡೆಸಿದ ಪ್ರತಿಭಾನ್ವೇಷಣೆಯಲ್ಲಿ 92 ಯುವ ಕ್ರಿಕೆಟ್ ಆಟಗಾರರಲ್ಲಿ ಯುವ ಕ್ರಿಕೆಟಿಗರಾದ ನಂದ ಕಿಶೋರ್ ಹಾಗೂ ಎನ್. ಶ್ರೇಯಸ್ ಅವರು ತವರು ತಂಡ ಮೈಸುರು ವಾರಿಯರ್ಸ್ ತಂಡಕ್ಕೆ ಆಯ್ಕೆ ಯಾಗಿದ್ದಾರೆ,




ಎನ್. ಶ್ರೇಯಸ್



ನಂದ ಕಿಶೋರ್

ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದ ಮಾಲೀಕರಾದ ಎನ್.ಆರ್. ಸಮೂಹವು 'ಕ್ರಿಕೆಟ್ ಟ್ಯಾಲಂಟ್ ಹಂಟ್' ಪ್ರತಿಭಾನ್ವೇಷಣೆ ಆಯ್ಕೆ ಶಿಬಿರವನ್ನು ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶದವರಿಗಾಗಿಯೇ ವಿಶೇಷವಾಗಿ ಆಯೋಜಿಸಲಾಸಿತ್ತು, ಗ್ರಾಮೀಣ ಭಾಗದಲ್ಲಿರುವ ಕ್ರಿಕೆಟ್ ಪ್ರತಿಭೆಗಳನ್ನು ಬೆಳೆಸಲು, ಸಣ್ಣ ಪಟ್ಟಣಗಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡಲು ಆಯ್ಕೆ ಶಿಬಿರ ನಡೆಸಲಾಗಿತ್ತು.

ಟ್ಯಾಲೆಂಟ್ ಹಂಟ್‌ನಲ್ಲಿ ಮಂಡ್ಯ, ರಾಮನಗರ, ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ಸುಮಾರು 92 ಜನರ ಸಕ್ರಿಯ ಸಹಭಾಗಿತ್ವ ಕಂಡುಬಂದಿತು. ಇದರಲ್ಲಿ 40 ಬೌಲರ್‌ಗಳು, 14 ಬ್ಯಾಟ್ಸ್‌ಮನ್‌ಗಳು, 30 ಆಲ್ ರೌಂಡರ್‌ಗಳು ಮತ್ತು 8 ವಿಕೆಟ್ ಕೀಪರ್ ಕಂ ಬ್ಯಾಟ್ಸ್‌ಮನ್‌ಗಳು ಸ್ಪರ್ಧಿಸಿದರು. ಆರಂಭಿಕ ಸುತ್ತುಗಳ ಕೊನೆಯಲ್ಲಿ, 24 ಆಟಗಾರರನ್ನು ಆರಿಸಿಕೊಳ್ಳಲಾಯಿತು. ಅವರನ್ನು ಟಿ-20 ಪಂದ್ಯಕ್ಕೆ ಎರಡು ತಂಡಗಳಾಗಿ ವಿಂಗಡಿಸಲಾಯಿತು. ಆಯ್ಕೆಯಾದ ಆಟಗಾರರು ತರಬೇತಿ ಪಡೆದು ಅವರಲ್ಲಿ ಇಬ್ಬರು ಆಟಗಾರರಾದ, ನಂದ ಕಿಶೋರ್, ಜೊ ಜೊ ಕ್ರಿಕೆಟ್ ಕ್ಲಬ್ ಹಾಗು ಎನ್. ಶ್ರೇಯಸ್ ಅವರು ಕೊನೆಯ ಸುತ್ತಿನಲ್ಲಿ ಆಯ್ಕೆಯಾಗಿದ್ದಾರೆ. ಈ ಇಬ್ಬರು ಆಟಗಾರರು ಮುಂಬರುವ ಕೆಪಿಎಲ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸುತ್ತಾರೆ.

ಅಲ್ಲದೇ, ಅವರಿಗೆ ಆಗಸ್ಟ್ 25 ರಿಂದ ಸೆಪ್ಟೆಂಬರ್ 5 ರವರೆಗೆ ನಡೆಯುಲಿರುವ ಮೈಸೂರು ವಾರಿಯರ್ಸ್‌ನ ಅಭ್ಯಾಸದಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ. ಆಯ್ಕೆಯಾದ ಆಟಗಾರರ ಹೆಸರುಗಳನ್ನು ಮೈಸೂರು ವಾರಿಯರ್ಸ್‌ನ ಅಧಿಕೃತ ತಂಡವಾಗಿ ಸೆಪ್ಟೆಂಬರ್ 7ರಂದು ಘೋಷಿಸಲಿದೆ.